**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 7

ಸಿ.ಡಬ್ಲ್ಯೂಃ 9

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಸಲೀಂ |
| ತಂದೆಯ ಹೆಸರು | ಸಂಶುದ್ದೀನ್ |
| ವಯಸ್ಸು | 47 ವರ್ಷ |
| ಉದ್ಯೋಗ | ಟೆಂಪೋ ಚಾಲಕ |
| ವಿಳಾಸ | ಉಚ್ಚಿಲ |

ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಕಳೆದ 30 – 35 ವರ್ಷಗಳಿಂದ ಟೆಂಪೋ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೇನೆ. ಈ ಮೊದಲು ಟೆಂಪೋ ನಂಬ್ರ ಕೆಎ-19-6138 ನಂಬರಿನ ಟೆಂಪೋದ ಮಾಲೀಕನಾಗಿದ್ದೆ. ಅದನ್ನು ಉಚ್ಚಿಲ ಮತ್ತು ಸುತ್ತಮುತ್ತಲಿನ ಸ್ಥಳೀಯ ಬಾಡಿಗೆಯಲ್ಲಿ ಓಡಿಸುತ್ತಿದ್ದೆ. ನಾನೇ ಅದರ ಚಾಲಕನಾಗಿದ್ದೆ. ನನಗೆ ಚಾಸಾ-1 ಗೊತ್ತು. ಅವರು ಕಸವಿಲೇವಾರಿ ಘಟಕದ ಟೆಂಡರ್ ಪಡೆದಿದ್ದರು. ಅವರು ಬಾಡಿಗೆಗೆ ಹೇಳಿದ್ದರಿಂದ ನನಗೆ ಪರಿಚಯವಾಗಿತ್ತು.

2) ದಿನಾಂಕ 25-02-2022 ರಂದು ಬೆಳಗ್ಗಿನ 7.15 ರ ಸಮಯಕ್ಕೆ ಚಾಸಾ-1, ನನ್ನ ವಾಹನವನ್ನು ಬಾಡಿಗೆಗಾಗಿ ಕೇಳಿದ್ದರು. ಅದಕ್ಕಾಗಿ ನಾನು ನನ್ನ ವಾಹನವನ್ನು ಉಚ್ಚಿಲದ ಮೀನು ಮಾರ್ಕೆಟ್ ಬಳಿಯಲ್ಲಿರುವ ಕಸ ವಿಲೇವಾರಿ ಘಟಕಕ್ಕೆ ಚಾಸಾ-1 ಕರೆದುಕೊಂಡು ಹೋಗಿದ್ದರು. ಅಲ್ಲಿ ಅವರ ಲೇಬರ್ ಗಳು ಕಸವನ್ನು ಟೆಂಪೋದಲ್ಲಿ ಲೋಡ್ ಮಾಡಿದ್ದರು. ನನಗೆ ಚಾಸಾ-2 ಗೊತ್ತು. ಅವರೂ ಸಹ ಅಲ್ಲಿಗೆ ಬಂದಿದ್ದರು. ಲೋಡ್ ಆದ ನಂತರ, ಚಾಸಾ-1 ಇವರು ನನ್ನ ಟೆಂಪೋವನ್ನು ಅವರ ಕಾರಿನ ಹಿಂದೆ ಬರುವಂತೆ ಹೇಳಿದ್ದರು. ನನ್ನ ಟೆಂಪೋದಲ್ಲಿ ಇಬ್ಬರು ಲೇಬರ್ ಗಳು ಇದ್ದರು. ಮುಂದೆ

ಹೋಗುತ್ತಿದ್ದ ಕಾರಿನಲ್ಲಿ ಚಾಸಾ-1 ಮತ್ತು 2 ಇದ್ದರು. ಅವರು ಅಲ್ಲಿಂದ ಪ್ಲೋಟ್ಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಅವರು ಹೇಳಿದ ಜಾಗೆಯಲ್ಲಿ ಗಾಡಿಯನ್ನು ನಿಲ್ಲಿಸಿದ್ದೆ. ಅವರು ಹೇಳಿದ ಜಾಗೆಗೆ ಗಾಡಿ ಹೋಗಲು ಅಗುತ್ತಿರಲಿಲ್ಲ, ಆದ್ದರಿಂದ ರೋಡಿನಲ್ಲಿ ನಿಲ್ಲಲು ಹೇಳಿದ್ದರು. ಅಲ್ಲಿ ಟೆಂಪೋದಿಂದ ಕಸದ ಮೂಟೆಗಳನ್ನು ಕೆಳಗೆ ಇಳಿಸಿದ್ದರು. ಆಗ ಅಲ್ಲಿ ಸೇರಿದ ಸುಮಾರು ಜನ ಟೆಂಪೋವನ್ನು ಮರಳಿ ತೆಗೆದುಕೊಂಡು ಹೋಗಲು ಹೇಳಿದರು, ಅದರಂತೆ ತಂದಿದ್ದೆವು. ಅಲ್ಲಿ ಕಸ ಇಳಿಸುವ ಬಗ್ಗೆ ತಕರಾರು ಮಾಡಿದ್ದರು.

3) ಅಲ್ಲಿಂದ ಕಸವನ್ನು ಪುನಃ ಲೋಡ್ ಮಾಡಿದ ಜಾಗೆಗೆ ತಂದು ಇಳಿಸಿದ್ದೆವು. ಆದಿನ ತಕರಾರು ಮಾಡಿದಾಗ ಚಾಸಾ-1 ಮತ್ತು 2 ಇದ್ದ ಬಗ್ಗೆ ಗೊತ್ತಿಲ್ಲ. ಜನ ತಕರಾರು ಮಾಡಿದ್ದರಿಂದ ನಾನು ಗಾಡಿಯನ್ನು ತಂದಿದ್ದೆ. ಆದಿನ ತಕರಾರು ಮಾಡಿದ ಅನೇಕ ಜನರಲ್ಲಿ ಆರೋಪಿಯನ್ನು ನೋಡಿಲ್ಲ. ಆದಿನ ಅಲ್ಲಿ ಆರೋಪಿ, ಚಾಸಾ-1 ಇವರಿಗೆ ಬೈದು , ಹಲ್ಲೆ ಮಾಡಿದ ಬಗ್ಗೆ ನೋಡಿಲ್ಲ. (ಈ ಹಂತದಲ್ಲಿ ಸಾಕ್ಷಿ ಈ ಉತ್ತರ ಕೊಡುವಾಗ ಧ್ವನಿ ಏರಿಸಿ ಉತ್ತರಿಸಿರುತ್ತಾರೆ, ಮೊದಲಿನಂತೆ ಸೌಮ್ಯವಾಗಿ ಉತ್ತರಿಸಲು ಹೇಳಿದೆ)

4) ಆದಿನ ಚಾಸಾ-1, ಇವರಿಗೆ ಪೆಟ್ಟಾಗಿದ್ದ ಬಗ್ಗೆ, ಚಾಸಾ-1, ಅರೋಪಿಯ ಬಗ್ಗೆ ದೂರು ಕೊಟ್ಟ ಬಗ್ಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ, ಹೇಳಿಕೆ ಪಡೆದಿದ್ದಾರ ಎಂದರೆ, ನನ್ನ ಸಹಿಯನ್ನು ಮಾತ್ರವೇ ಪಡೆದಿದ್ದರು. ಚಾಸಾ-1 ಮತ್ತು ಆರೋಪಿ ಯಾವ ಜಾತಿಗೆ ಸೇರಿದವರು ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟೀಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ಆದಿನ ನಾನು ಕಸವನ್ನು ತೆಗೆದುಕೊಂಡು ಚಾಸಾ-1 ಹೇಳಿದ ಜಾಗೆಯಲ್ಲಿ ನಿಲ್ಲಿಸಿ, ಕಸ ಇಳಿಸುತ್ತಿದ್ದಾಗ ಬಂದಿದ್ದ ಆರೋಪಿ ನಮಗೆ ''ಯಾರ ಅಪ್ಪನಾ ಜಾಗೆ ಎಂದು ಕಸ ಹಾಕುತ್ತಿದ್ದೀರಿ ಎಂದು '' ಹೇಳಿದ್ದರು ಎಂದರೆ ಗೊತ್ತಿಲ್ಲ. ಆಗ ಚಾಸಾ-1, ಪಂಚಾಯಿತಿಯವರು ಗುರುತಿಸಿ ಕೊಟ್ಟ ಜಾಗೆಯಲ್ಲಿ ಕಸ ಹಾಕುತ್ತಿರುವುದಾಗಿ

ಹೇಳಿದ್ದರು ಎಂದರೆ ಸಾಕ್ಷಿ ಸುಮ್ಮನಿದ್ದಾರೆ. ಆಗ ಆರೋಪಿ ಕಾರ್ಮಿಕರಿಗೆ ಹೊಡೆಯಲು ಬಂದಾಗ, ಚಾಸಾ-1 ಹೊಡೆಯಬಾರದೆಂದು ತಡೆದಿದ್ದರು ಎಂದರೆ ಗೊತ್ತಿಲ್ಲ. ಆರೋಪಿ, ಚಾಸಾ-1 ಇವರಿಗೆ ''ಸೂಳೆ ರಂಡೇ ಎಂದು ಬೈಯುತ್ತಾ, ಚಾಸಾ-1 ಈಕೆಗೆ ಕೀಳು ಜಾತಿಯವಳು ಎಂದು ಬೈದು, ನಿನಗೆ ಮಾಡಲು ಬೇರೆ ಕೆಲಸಾ ಇಲ್ಲವಾ ಎಂದು ಬೈದಿದ್ದರು'' ಎಂದರೆ ಗೊತ್ತಿಲ್ಲ. ಅರೋಪಿ ಚಾಸಾ-1 ಇವರ ಎಡಕೆನ್ನೆಗೆ ಹಲ್ಲೆ ಮಾಡಿ, ಅವರ ಕೈಯಲ್ಲಿ ಇದ್ದ ಮೊಬೈಲ್ ನ್ನು ಕಿತ್ತು ರಸ್ತೆಗೆ ಎಸೆದಿದ್ದರು ಎಂದರೆ ಗೊತ್ತಿಲ್ಲ. ಆರೋಪಿ, ಚಾಸಾ-1 ಇವರಿಗೆ ಇನ್ನೊಂದು ಬಾರಿ ಆ ಜಾಗೆಯ ಹತ್ತಿರ ಬಂದರೆ ಕೈಕಾಲು ಕತ್ತರಿಸುವುದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-6 ಅಲ್ಲಿಗೆ ಬರುತ್ತಿರುವುದನ್ನು ನೋಡಿ ಆತ ಹೋಗಿದ್ದ ಎಂದರೆ ಸರಿಯಲ್ಲ. ಆಗ ಅಲ್ಲಿಗೆ ಬಂದಿದ್ದ ಪಂಚಾಯಿತಿಯ ಅಧಿಕಾರಿಗಳು ಸಹ, ಚಾಸಾ-1 ಇವರನ್ನು ವಿಚಾರಿಸಿದ್ದರು ಎಂದರೆ, ಗೊತ್ತಿಲ್ಲ. ನಂತರ ಅಲ್ಲಿಗೆ ಚಾಸಾ-1 ಹೇಳಿದ್ದರಿಂದ, ಅನ್ ಲೋಡ್ ಮಾಡಿದ ಮೂಟೆಗಳನ್ನು ಪುನಃ ಲೋಡ್ ಮಾಡಿ ತಂದಿದ್ದೆವು ಎಂದರೆ ನಿಜ. ಈ ಘಟನೆಗಾಗಿ ಚಾಸಾ-1 ನಂತರ ದೂರು ಕೊಟ್ಟಿದ್ದರು ಎಂಬುದಕ್ಕಾಗಿ ಪೊಲೀಸರು ನನ್ನನ್ನು ವಿಚಾರಿಸಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ದಿಃ 01-03-2022 ರಂದು ವಿಚಾರಿಸಿದಾಗ, ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಶಾನೆ ಪಿ-12** ಎಂದು ಗುರುತಿಸಿದೆ.

2) ನನಗೆ ಚಾಸಾ-1 ಕೊಟ್ಟ ದೂರಿನ ಬಗ್ಗೆ ಗೊತ್ತಿದ್ದರೂ ಸಹ, ಈಗ ನಾನು ಅರೋಪಿಗೆ ಹೆದರಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರವಾಗಿಃ ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ ಇಲ್ಲ ಎಂದು ಸಲ್ಲಿಸಿದ್ದಾರೆ**

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.